ಶ್ರೀ ಬಿ. ಚಿಕ್ಕಣ್ಣ.—ರೋಗಿಗಳಿಗೆ ಇಂಜಕ್ಷನ್ ಕೊಡ ಬೇಕಾದರೆ ಡಾಕ್ಟರುಗಳು ಕೊಡುತ್ತಾರೆಯೇ ಅಥವಾ ನರ್ಸ್‌ಗಳು ಕೊಡುತ್ತಾರೆಯೇ ?

ಶ್ರೀ ಟಿ ಚನ್ನಯ್ಯ.—ಡಾಕ್ಟರುಗಳು ಕೊಡುತ್ತಾರೆ. ಆದರೆ ಅನುಭವಿಗಳಾದ ನರ್ಸ್‌ಗಳಿದ್ದರೆ ಅವರೂ ಕೊಡುತ್ತಾರೆ.

ಶ್ರೀ ಎಸ್. ಸಿದ್ದಪ್ಪ.—ಸ್ಪೆಷಲ್‌ವಾರ್ಡುಗಳನ್ನು ರೋಗಿಗಳ ಅನುಕೂಲಕ್ಕೋಸ್ಕರ ನಾವು ತೆಗೆದುಕೊಳ್ಳಬೇಕೇ ಅಥವಾ ಸರ್ಕಾರಕ್ಕೆ ದುಡ್ಡು ಬರಬೇಕು ಎನ್ನುವ ಉದ್ದೇಶದಿಂದ ತೆಗೆದುಕೊಳ್ಳಬೇಕೇ ?

ಶ್ರೀ ಟಿ. ಚನ್ನಯ್ಯ.—ರೋಗಿಗಳ ಅನುಕೂಲಕ್ಕೂ ಮತ್ತು ಸರ್ಕಾರಕ್ಕೆ ಹಣ ಬರುವುದಕ್ಕೂ ಈ ಎರಡು ಉದ್ದೇಶಗಳಿಗೂ ತೆಗೆದುಕೊಳ್ಳಬೇಕು.

ಶ್ರೀ ಎಸ್. ಸಿದ್ದಪ್ಪ.—ಆದ್ದರಿಂದ ಹತ್ತು ರೂಪಾಯಿ ವಾರ್ಡುಗಳನ್ನು ನಾವು ತೆಗೆದುಕೊಂಡರೆ ರೋಗಿಗೆ ನ್ಯಾಯವಾದ ಎಲ್ಲ ಸೌಕರ್ಯಗಳೂ ಮತ್ತು ಸೌಲಭ್ಯಗಳೂ ಅದರಲ್ಲಿ ಇರಬೇಕಲ್ಲವೆ ?

ಶ್ರೀ ಟಿ. ಚನ್ನಯ್ಯ.—ಈ ಸೌಕರ್ಯಗಳನ್ನು ಕೊಡ ಲಾಗುತ್ತಿದೆ.

Sri SYDNEY A. THOMAS.—Would it not be in consonance with the concept if we abolish all kinds of special wards in hospitals ?

Sri T. CHANNIAH.—That is not a practicable solution.

Mr. SPEAKER.—After the achievement of socialistic society, it will be all right.

Mobile Dispensaries (Provision for Rural Parts).

Q.—524. Srimathi Bellary SIDDAMMA (Davangere).—

Will the Government be pleased to state :—

whether they have made arrangements for providing medical aid through mobile dispensaries to the villages which have no dispensaries ?

A.—Sri T. CHANNIAH (Minister for Public Health and Local Self-Government).—

Yes, to the extent practicable.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಸೌಕರ್ಯಗಳನ್ನು ಒದಗಿಸಬೇಕು ಎಂದು ಕೇಳಿದ್ದಕ್ಕೆ ಕಾರ್ಯತಃ ಸಾಧ್ಯ ವಾಗುವಷ್ಟರಮಟ್ಟಿಗೆ ಏರ್ಪಾಡು ಮಾಡಲಾಗಿದೆ ಎಂದು ಉತ್ತರ ಕೊಟ್ಟಿದೆ. ಇದರಿಂದ ಗ್ರಾಮಾಂತರ ಗಳಲ್ಲಿ ರೋಗಿಗಳಿಗೆ ವೈದ್ಯ ಸಹಾಯ ದೊರಕುತ್ತಿ ದೆಯೇ ?

ಶ್ರೀ ಟಿ. ಚನ್ನಯ್ಯ.—ಎಲ್ಲಿ ಆಸ್ಪತ್ರೆಗಳಿಲ್ಲವೋ ಎಲ್ಲಿ ಹೆಚ್ಚಿಗೆ ಆಸ್ಪತ್ರೆಗಳ ಸೌಕರ್ಯ ಬೇಕು ಎನ್ನುತ್ತಾರೆಯೋ ಆ ಗ್ರಾಮಗಳಿಗೆ ಈ ಮೊಬೈಲ್ ಡಿಸ್ಪೆನ್ಸರಿಯವರು ಹೋಗಿ ರೋಗಿಗಳನ್ನು ನೋಡಿ ಚಿಕಿತ್ಸೆ ಕೊಡುವುದಕ್ಕೆ ಎಲ್ಲ ಅನುಕೂಲತೆಗಳನ್ನೂ ಮಾಡಲಾಗಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಡಾಕ್ಟರುಗಳಿಗೆ ಒಂದು ವಾಹನ ಸೌಕರ್ಯವನ್ನು ಒದಗಿಸಿದರೆ ಎಲ್ಲರನ್ನೂ ಅವರು ನಂದರ್ಶಿಸಬಹುದಲ್ಲವೆ ?

ಶ್ರೀ ಟಿ. ಚನ್ನಯ್ಯ.—ಐದು ಸ್ಥಳಗಳಲ್ಲಿ ವಾಹನಗ ಳನ್ನು ಒದಗಿಸಿದ್ದೇವೆ. ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮತ್ತು ಚಿಂತಾಮಣಿ ಈ ಐದು ಸ್ಥಳಗಳಲ್ಲಿ ವಾಹನ ಸೌಕರ್ಯವನ್ನು ಏರ್ಪಾಡು ಮಾಡಲಾಗಿದೆ. ಈ ವಾಹನಗಳಲ್ಲಿ ಅನೇಕ ಗ್ರಾಮ ಗಳಿಗೆ ಹೋಗಿ ಎಲ್ಲೆಲ್ಲಿ ಆಸ್ಪತ್ರೆಯ ಅವಶ್ಯಕತೆ ಇದೆಯೋ ಅಂಥ ಸ್ಥಳಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ಯನ್ನು ಕೊಡುತ್ತಿದ್ದಾರೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಚಿತ್ರದುರ್ಗ, ಹಾಸನ, ಈ ಊರುಗಳ ವಿಷಯ ನಾನು ಕೇಳಲಿಲ್ಲ. ಗ್ರಾಮಾಂತರ ಪ್ರದೇಶಗಳಿಗೆ ಇದರ ಸೌಕರ್ಯ ಒದಗ ಬೇಕು ಎಂಬ ಉದ್ದೇಶದಿಂದ ಈ ಪ್ರಶ್ನೆಯನ್ನು ಕಳು ಹಿಸಿದ್ದೇನೆ. ಸಣ್ಣ ಸಣ್ಣ ಹಳ್ಳಿಗಳಿಗೆ, ಗ್ರಾಮಾಂತರ ಗಳಿಗೆ ವೈದ್ಯಕೀಯ ಸೌಕರ್ಯವನ್ನು ಒದಗಿಸುವ ಉದ್ದೇಶದಿಂದ, ಅಪಾಯಕ್ಕೆ ಗುರಿಯಾಗಿರುವ ಹೊತ್ತಿ ನಲ್ಲಿ ವೈದ್ಯ ಸಹಾಯ ಒದಗಬೇಕು ಎನ್ನುವ ಉದ್ದೇಶ ದಿಂದ ಆಸ್ಪತ್ರೆಗಳಿಗೆ ವಾಹನ ಸೌಕರ್ಯವನ್ನು ಒದಗಿ ಸಬೇಕು ಎಂದು ಕೇಳುತ್ತಿದ್ದೇನೆ. ಆದುದರಿಂದ ವಾಹನಗಳನ್ನು ಒದಗಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನಾವು ಹೇಳುವುದು ಸೂಕ್ತ ವಾಗಿದೆ. ಆದರೆ ಪ್ರತಿಯೊಂದು ಗ್ರಾಮಕ್ಕೂ ಸಹ ವಾಹನಗಳಲ್ಲಿ ಹೋಗಿ ರೋಗಿಗಳಿಗೆ ಚಿಕಿತ್ಸೆಯನ್ನು ಕೊಡಬೇಕಾದರೆ ಬಹಳ ವಾಹನಗಳನ್ನು ಏರ್ಪಾಡು ಮಾಡಬೇಕು. ಈ ರೀತಿ ಮಾಡಬೇಕಾದರೆ ಒಂದು ವಾಹನಕ್ಕೆ ಪ್ರಥಮತಃ 15-20 ಸಾವಿರ ರೂಪಾಯಿಗ ಳನ್ನೂ ಅನಂತರ ವರ್ಷ ಒಂದಕ್ಕೆ ಏಳು ಸಾವಿರ ರೂಪಾಯಿಗಳನ್ನೂ ಸರ್ಕಾರದವರು ಖರ್ಚು ಮಾಡ ಬೇಕಾಗುತ್ತದೆ. ಆದುದರಿಂದ ಹೀಗೆ ತಾಲ್ಲೂಕು ಮತ್ತು ಹೋಬಳಿ ಹೆಡ್ ಕ್ವಾರ್ಟರುಗಳಲ್ಲಿರುವ ಆಸ್ಪತ್ರೆಗಳಿಗೆಲ್ಲಕ್ಕೂ ವಾಹನಗಳನ್ನು ಕೊಟ್ಟು ಗ್ರಾಮಾಂತರಗಳಲ್ಲಿ ಚಿಕಿತ್ಸೆ ಕೊಡಬೇಕಾದರೆ ಲಕ್ಷಾಂತರ ರೂಪಾಯಿಗಳ ಹಣ ಖರ್ಚಾಗುತ್ತದೆ. ಅದಕ್ಕಿಂತಲೂ ಸುಲಭವಾದ ರೀತಿಯಲ್ಲಿ ಮಾಡಲು Reduced Scale Dispensaries, ಬಹಳ ಕಡಿಮೆ ಖರ್ಚಿನ ಆಸ್ಪತ್ರೆಗಳಿಗೆ ಪ್ರಥಮತಃ ಒಂದು ಸಾವಿರ ರೂಪಾಯಿ ಮತ್ತು ವರ್ಷಂಪ್ರತಿ 4 ಸಾವಿರ ರೂಪಾ ಯಿ ಖರ್ಚು ಮಾಡಬೇಕಾಗುತ್ತದೆ. ಹೀಗೆ 5 ಸಾವಿರ ರೂಪಾಯಿ ಖರ್ಚುಮಾಡಿ ಒಂದೊಂದು ಆಸ್ಪತ್ರೆಯನ್ನು ಏರ್ಪಡಿಸುವುದು ವಾಹನಗಳ ಆಸ್ಪತ್ರೆಗಳಿಗಿಂತ ಉತ್ತಮವಾದುದು. ಈ ರೀತಿ ಎಲ್ಲ ಗ್ರಾಮಗಳಿಗೂ ಚಿಕಿತ್ಸೆಯ ಸೌಲಭ್ಯವನ್ನು ಒದಗಿಸತಕ್ಕ ವ್ಯವಸ್ಥೆ ಯನ್ನು ಮಾಡಬೇಕಾದರೆ ಇನ್ನೂ ಬಹಳ ವರ್ಷಗಳು ಹಿಡಿಯುತ್ತವೆ. ಈಗಾಗಲೇ ಸಾಕಾದಷ್ಟು ಸೌಕರ್ಯ ಗಳನ್ನು ಕೂಡ ಮೈಸೂರು ಸರ್ಕಾರದವರು, ಯಾವ ಸಂಸ್ಥಾನದಲ್ಲಿ. . .

ಶ್ರೀ ಎ. ಭೀಮಪ್ಪನಾಯಕ್.—ಮಂತ್ರಿಗಳು ಭಾಷಣ ಮಾಡುತ್ತಿದ್ದಾರೆಯೇ ಅಥವಾ ಪ್ರಶ್ನೆಗೆ ಉತ್ತರ ಕೊಡುತ್ತಿದ್ದಾರೆಯೇ ?

Mr. SPEAKER.—A long answer.

ಶ್ರೀ ಟಿ. ಚನ್ನಯ್ಯ.—ಆದುದರಿಂದ ಮಾನ್ಯ ಸದಸ್ಯರು ಕೇಳತಕ್ಕ ಪ್ರಕಾರ ಹೆಚ್ಚಾಗಿ ವಾಹನಗಳನ್ನು ಒದಗಿಸು ವುದಕ್ಕೆ ಸರ್ಕಾರಕ್ಕೆ ಹಣದ ಅಭಾವದಿಂದ ಸಾಧ್ಯವಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ರೆಡ್ಯೂಸ್ಡ್ ಸ್ಕೇರ್ ಮಾಡಬೇಕೆಂದಿರುವಾಗ ಮೊಬೈಲ್ ಡಿಸ್ಪೆನ್ಸರಿ ಕೊಡುವುದೇಕೆ ?

ಶ್ರೀ ಟಿ. ಚನ್ನಯ್ಯ.—ನಿಮ್ಮಂಥವರು ಮೊಬೈಲ್ ಡಿಸ್ಪೆನ್ಸರಿಗಳನ್ನು ಕೇಳುವುದರಿಂದ.

ಶ್ರೀ ಎ. ಭೀಮಪ್ಪನಾಯಕ್.—ಅದರಿಂದ ಅನುಕೂಲವಿಲ್ಲವೆಂದು ಕಂಡಮೇಲೆ ಪ್ರಯೋಜನವಿಲ್ಲದ್ದನ್ನು ಏಕೆ ಮಾಡಬೇಕು ?

ಶ್ರೀ ಟಿ. ಚನ್ನಯ್ಯ.—ಅವಗಳಿಂದ ಹೆಚ್ಚಿನ ಸೌಕರ್ಯ ವಿದೆಯೆಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಂದಲೂ ಅರಿಕೆಗಳು ಬಂದಿದ್ದರಿಂದ ಕೊಡಲಾಗುತ್ತಿದೆ.

ಶ್ರೀ ಎ. ಭೀಮಪ್ಪನಾಯಕ್.—ಹೆಚ್ಚಿನ ಸೌಕರ್ಯ ವೆಂದು ಒಂದು ಸಲ ಹೇಳುತ್ತೀರಿ, ಇನ್ನೊಂದು ಸಲ ರೆಡ್ಯೂಸ್ಡ್ ಸ್ಕೇರ್ ಮಾಡಬೇಕೆಂದು ಹೇಳುತ್ತೀರಿ. ನಿರ್ದಿಷ್ಟವಾದ ಅಭಿಪ್ರಾಯವೇನಿದೆ ?

ಶ್ರೀ ಟಿ. ಚನ್ನಯ್ಯ.—ಹೆಚ್ಚಿನ ಸೌಕರ್ಯವಿದೆ. ಆದರೆ ಹಣದ ಅಭಾವದಿಂದ ಸಾಕಾದಷ್ಟು ಮೊಬೈಲ್ ಡಿಸ್ಪೆನ್ಸರಿಗಳನ್ನು ಒದಗಿಸಲು ಸಾಧ್ಯವಿಲ್ಲವಾಗಿದೆ.

ಶ್ರೀಮತಿ ಬಿ. ಎಸ್. ಸುಬ್ಬಮ್ಮ.—ಚಿಕ್ಕಮಗಳೂರು ಡಿಸ್ಪೆನ್ಸರಿಯ ವ್ಯಾಪ್ತಿ ಎರಡು ವರ್ಷಗಳಿಂದ ಮುರಿದು ಮೂಲೆಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Mr. SPEAKER.—It does not arise.

ಶ್ರೀಮತಿ ಬಿ. ಎಸ್. ಸುಬ್ಬಮ್ಮ.—ಸರ್ಕಾರದವರು ಅನುಕೂಲವಾಗಬೇಕೆಂಬ ಉದ್ದೇಶದಿಂದ ಒಂದು ಸಂಸ್ಥೆಗೆ ಕೊಟ್ಟಿರುವಾಗ ಆ ಉದ್ದೇಶ ನೇರವೇರುತ್ತಿಲ್ಲವೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅನುಕೂಲವಿಲ್ಲವೆಂದು ಹೇಳಲಾಗುವುದಿಲ್ಲ. ಆದರೆ ವ್ಯಾನುಗಳು ರಿಪೇರಿ ಬಗ್ಗೆರೆ ಆಗಬೇಕಾದಾಗ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕೆ ತಿಳಿಸಿ ಹಣ ಮಂಜೂರು ಮಾಡಿಸಿಕೊಂಡು ಸರಿಪಡಿಸಿ ಅನುಕೂಲ ಒದಗಿಸಬಹುದು.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಾಸನ ಡಿಸ್ಪೆನ್ಸರಿಗೆ ಮೊಬೈಲ್ ಡಿಸ್ಪೆನ್ಸರಿಗಳನ್ನು ಎಷ್ಟು ಕೊಡಲಾಗಿದೆ ?

ಶ್ರೀ ಟಿ. ಚನ್ನಯ್ಯ.—ಒಂದನ್ನು ಕೊಡಲಾಗಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಮಲೆನಾಡಿಗೆ ಎಷ್ಟು ಮೊಬೈಲ್ ಡಿಸ್ಪೆನ್ಸರಿಗಳನ್ನು ಕೊಟ್ಟಿದೆಯೆಂಬುದನ್ನು ಹೇಳಬಲ್ಲಿರಾ ?

ಶ್ರೀ ಟಿ. ಚನ್ನಯ್ಯ.—ಮಲೆನಾಡು ಡಿಸ್ಟ್ರಿಕ್ಟುಗಳಿಗೆಲ್ಲಾ ಒಂದೊಂದು ಡಿಸ್ಪೆನ್ಸರಿ ಕೊಡಲಾಗಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಯಾವ ಯಾವ ಡಿಸ್ಟ್ರಿಕ್ಟಿಗೆ ಮಲೆನಾಡಿನಲ್ಲಿ ಕೊಡಲಾಗಿದೆ ?

ಶ್ರೀ ಟಿ. ಚನ್ನಯ್ಯ.—ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಈ ಮೂರು ಮಲೆನಾಡಿನ ಡಿಸ್ಟ್ರಿಕ್ಟುಗಳಿಗೂ ಒಂದೊಂದು ಡಿಸ್ಪೆನ್ಸರಿ ಕೊಡಲಾಗಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಮಲೆನಾಡು ಪ್ರಾಂತ್ಯಕ್ಕೇ ಬೇರೆ ಮೊಬೈಲ್ ಡಿಸ್ಪೆನ್ಸರಿ ಕೊಡಲಾಗಿದೆಯೆ ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟಿಗೆ ಕೊಟ್ಟಿದೆ. ಅಲ್ಲಿಂದ ಗ್ರಾಮಾಂತರಗಳಿಗೆ ಸರ್ವಿಸ್ ಕೊಡಬೇಕೆಂಬ ಉದ್ದೇಶವಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈ ಮೊಬೈಲ್ ಡಿಸ್ಪೆನ್ಸರಿಯಿಂದ ಹಾಸನದ ಸುತ್ತಮುತ್ತಲಿರುವ ಊರುಗಳಿಗೆ ಸಹಾಯವಾಗಿಲ್ಲವೆಂಬುದು ಸರ್ಕಾರದ ಅವಗಾಹನೆಗೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಹಾಸನದ ಸುತ್ತಮುತ್ತಲಿರುವ ಗ್ರಾಮಾಂತರಗಳಿಗೆ ಹೋಗಿ ಚಿಕಿತ್ಸೆ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಬಿ. ಎಂ. ಶ್ರೀನಪ್ಪ.—ಇಂಥ ವ್ಯಾನುಗಳಲ್ಲಿ ಸೌದೆ ತುಂಬಿಕೊಂಡು ಹೋಗುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ; ಈಗ ರೈಲಿನಲ್ಲಿ ತೆಗೆದುಕೊಂಡು ಹೋಗುವ ಹಾಗೆ ಡ್ರೈವರುಗಳು ಒಂದು ವೇಳೆ ಒಂದು ಹೊರೆ ಹಾಕಿಕೊಂಡು ಹೋದರೂ ಹೋಗಬಹುದು.

Sri H. C. LINGA REDDY.—Are Government aware that during the last Budget Session Government were urged to open four mobile dispensaries through cut-motions ?

Sri T. CHANNIAH.—Yes; public are urging Government to open more and more mobile dispensaries.

Sri H. C. LINGA REDDY.—Are Government of opinion to increase mobile dispensaries ?

Sri T. CHANNIAH.—Now we have sanctioned another mobile dispensary to Mandya and we are examining whether funds are available to open some more mobile dispensaries.

Sri H. C. LINGA REDDY.—Is it not a fact that by opening mobile dispensaries medical treatment would be taken to the very doors of the villagers ?

Sri T. CHANNIAH.—That is the intention of the Government.

Mr. SPEAKER.—Questions 40 and 57 may be taken up together as they refer to the same subject matter.

Mitra Mela Committee Report.

Q.—40. Sri S. SRINIVASA IYENGAR (T.-Narsipur).—

Will the Government be pleased to state :—

(*a*) whether the report of the Committee constituted for the purpose of enquiring into some incidents in the Maharaja's College, Mysore, last year under the heading *Mitra Mela*, has been received ;

(*b*) if so, whether the report will be placed on the Table of the House ?

A.—Sri A. G. RAMACHANDRA RAO (Minister for Law and Education).—

(*a*) The report is awaited by Government.